ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸಿದ್ಧರಾಮಯ್ಯನವರು ಹಿರಿಯ ಸದಸ್ಯರು, ಅವರು ಸಾಮಾನ್ಯವಾಗಿ ಸದನ ಮುಕ್ತಾಯವಾಗುವವರೆಗೂ ಇರುತ್ತಾರೆ. ನಾವು ಕೊಟ್ಟಿಲ್ಲ, ಸರ್ಕಾರದ್ದು,ಇಲಾಖೆಯದು, ನನ್ನದು ಪೈಫಲ್ಯ ಎನ್ನುವ ರೀತಿಯಲ್ಲಿ ಅಭಿಪ್ರಾಯ ಬರುವುದು ಬೇಡ. ನಾವು ಕೊಟ್ಟಿಲ್ಲವೆಂದರೆ ಕೊಟ್ಟಿಲ್ಲವೆಂದು ಹೇಳುತ್ತೇವೆ. ಕೊಟ್ಟಿದ್ದರೆ ಕೊಟ್ಟಿದ್ದೇವೆಂದು ಹೇಳುತ್ತೇವೆ.ಆದರೆ ತಮ್ಮ ಕಛೇರಿಯಲ್ಲಿ ಅದು ಯಾವುದೇಕಾರಣದಿಂದ ಶೂನ್ಯ ವೇಳೆ ವಿಷಯವೆಂದೋ, ನಿಯಮ 73ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದೋ, ಯಾವದೋ confusionನಿಂದ ಏನಾದರೂ ಆಗಿರಬಹುದು, ಆದರೆ ಸರ್ಕಾರ ಅದರ ಉತ್ತರವನ್ನು ತಲುಪಿಸಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು: ಆಯಿತು, ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8.00 ಗಂಟೆಗೆ ಮುಕ್ತಾಯಗೊಂಡು ಮತ್ತೆ ಮಂಗಳವಾರ ದಿನಾಂಕ 24.07.2012ರಂದು ಬೆಳಿಗ್ಗೆ 11.00 ಸೇರಲು ನಿಶ್ಚಯಿಸಿತು)

ಶ್ರೀರಂಗ ಏತ ನೀರಾವರಿ

ಅನುಭಂದ–1

61 (504)

ಶ್ರೀ ರಾಮಸ್ವಾಮಿ ಗೌಡ.ಬಿ.ಬಿ (ಕುಣಿಗಲ್)

ಪ್ರಶ್ನೆಗಳು

ಅ) ರಾಜ್ಯದಲ್ಲಿ ಹೇಮಾವತಿ ಜಲಾಶಯ ನಿರ್ಮಾಣ ಮಾಡುವ ಹಂತ ಅಥವಾ ತುಮಕೂರಿಗೆ ಹೇಮಾವತಿ ನೀರನ್ನು ಹರಿಸಬೇಕೆಂದು ಶಾಖಾ ನಾಲೆಗಳ ನೀಲಿನಕ್ಷೆಗಳನ್ನು ಸಿದ್ಧಪಡಿಸುವ ಹಂತಗಳಲ್ಲಿ ತುಮಕೂರು ಶಾಖಾ ನಾಲೆಯ 199 ನೇ ಕಿ.ಮೀ.ನಲ್ಲಿ ಶ್ರೀರಂಗ ಏತ ನೀರಾವರಿ ಯೋಜನೆ ಕೈಗೊಳ್ಳಬೇಕೆಂದು ಸರ್ಕಾರ ಯೋಜನೆ ಸಿದ್ದಪಡಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ ಈವರೆಗೆ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು;

ಇ) ಸದರಿ ಯೋಜನೆಯಿಂದ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಬಹುತೇಕ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಕೃಷಿಗೆ ಅನುಕೂಲಗಳಾಗುವ ಮಾಹಿತಿ ಸರ್ಕಾರಕ್ಕೆ ಇದೆಯೇ;

ಈ) ಸ್ಥಳೀಯ ನಾಗರೀಕರಿಗೆ ಕುಡಿಯುವ ನೀರು ವ್ಯವಸ್ಥೆ ಮತ್ತು ಕೃಷಿಗೆ ಸಹಾಯ ಕಲ್ಪಿಸುವುದಕ್ಕೆ ಈ ಯೋಜನೆಯನ್ನು ಸರ್ಕಾರ ಪ್ರಾರಂಭಿಸಲಾಗುವುದೇ?

ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರಗಳು

ಅ) ಹೇಮಾವತಿ ಜಲಾಶಯ ನಿರ್ಮಾಣ ಮಾಡುವ ಹಂತ ಅಥವಾ ತುಮಕೂರಿಗೆ ಹೇಮಾವತಿ ನೀರನ್ನು ಹರಿಸಬೇಕೆಂದು ಶಾಖಾ ನಾಲೆಗಳ ನೀಲಿನಕ್ಷೆಗಳನ್ನು ಸಿದ್ಧಪಡಿಸುವ ಹಂತಗಳಲ್ಲಿ ತುಮಕೂರು ಶಾಖಾ ನಾಲೆಯ 199 ನೇ ಕಿ.ಮೀ ನಲ್ಲಿ ಶ್ರೀರಂಗ ಏತ ನೀರಾವರಿ ಯೋಜನೆ ಕೈಗೊಳ್ಳಬೇಕೆಂದು ಯಾವುದೇ ಪ್ರಸ್ತಾವನೆಯನ್ನು ಸಿದ್ದಪಡಿಸಿರಲಿಲ್ಲ.

ಆ) ದಿನಾಂಕ: 03-03-1999 ಅಂದಿನ ಮಾನ್ಯ ಬೃಹತ್ ನೀರಾವರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಹಾಗೂ ಸರ್ಕಾರದ ಪತ್ರ ಸಂಖ್ಯೆ: ನೀಇ 138 ಎನ್‌ಹೆಚ್‌ಪಿ 96(ಪಿ), ದಿನಾಂಕ: 23-06-2000 ರೀತ್ಯಾ ಮಾಗಡಿ ತಾಲ್ಲೂಕಿನ ಒಟ್ಟು 86 ಕೆರೆಗಳ 11015 ಎಕರೆ ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯ ಒದಗಿಸುವ ಶ್ರೀರಂಗ ಏತ ನೀರಾವರಿ ಯೋಜನೆಯ ರೂ.96.00 ಕೋಟಿಗಳ ಅಂದಾಜಿನ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಕಾವೇರಿ ನೀರಾವರಿ ನಿಗಮದ ಸ್ಥಾಪನೆಯಾದ ನಂತರ ನಿಗಮದ ತಾಂತ್ರಿಕ ಉಪ ಸಮಿತಿಯ 7ನೇ ಸಭೆಯಲ್ಲಿ (ದಿನಾಂಕ: 12-02-2004) ಕೆಲವು ಷರತ್ತುಗಳಿಗೆ ಒಳಪಟ್ಟಂತೆ ನೀಡಿದ್ದ ತೆರವಿನ ಮೇರೆಗೆ ದಿನಾಂಕ: 20.02.2004 ರಂದು ನಡೆದ ನಿಗಮದ ಮಂಡಳಿಯ 4ನೇ ಸಭೆಯಲ್ಲಿ ದೊರೆತ ನಿರ್ದೇಶನದಂತೆ, ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಫೆಬ್ರವರಿ-2004 ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಏತನ್ಮಧ್ಯೆ, ತಮಿಳುನಾಡು ಸರ್ಕಾರವು ಕಾವೇರಿ ನ್ಯಾಯಾಧೀಕರಣ ಮುಂದೆ ದಾಖಲಿಸಿದ್ದ ಸಿ.ಎಂ.ಪಿ-2/2004 ರನ್ವಯ ನಿಗಮದ 3ನೇ ಮಂಡಳಿಯಲ್ಲಿ ತೆಗೆದುಕೊಂಡ ಯಾವುದೇ ನಿರ್ಧಾರಗಳನ್ನು ಆ ರಿಟ್‌ನ ಮೂಲ

ಉದ್ದೇಶಕ್ಕೆ ಧಕ್ಕೆ ಆಗದಂತೆ ನ್ಯಾಯಾಧೀಕರಣವು ನೀಡಿದ ನಿರ್ದೇಶನದಂತೆ ಮುಂದೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲಾಗಿಲ್ಲ.

ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿ ಹೇಮಾವತಿ ಯೋಜನೆಗೆ ಒಟ್ಟಾರೆ ಬೇಡಿಕೆಯಾದ 54.36 ಟಿ.ಎಂ.ಸಿ.ಗೆ ಎದುರಾಗಿ 43.67 ಟಿ.ಎಂ.ಸಿ. ಮಾತ್ರ ನೀರಿನ ಹಂಚಿಕೆಯಾಗಿದ್ದು ಅದರಲ್ಲಿ ಬರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶವನ್ನು ನೀರಿನ ಲೆಕ್ಕಾಚಾರ ಮಾಡುವಾಗ ಪರಿಗಣಿಸಿರುವುದಿಲ್ಲ ಹಾಗೂ ಈ ಯೋಜನೆಗೆ ನೀರಿನ ಹಂಚಿಕೆ ಇರುವುದಿಲ್ಲ. ನ್ಯಾಯಾಧೀಕರಣದ ಅಂತಿಮ ತೀರ್ಪಿನ ವಿರುದ್ದವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿ ಸಲ್ಲಿಸಿದೆ. ತಮಿಳುನಾಡು ಸರ್ಕಾರವು ಸಹಾ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತದೆ.

ಮೇಲಿನ ಕಾರಣಗಳಿಂದಾಗಿ ಈವರೆಗೆ ಈ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ.

ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಗ್ರಾಮಗಳು ಹೇಮಾವತಿ ಯೋಜನೆಯ ಅಚ್ಚುಕಟ್ಟಿನ ವ್ಯಾಪ್ತಿಯಲ್ಲಾಗಲಿ ಅಥವಾ ಶ್ರೀರಂಗ ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಾಗಲೀ ಬರುವುದಿಲ್ಲ.

ಸ್ಥಳೀಯ ನಾಗರೀಕರಿಗೆ ಕುಡಿಯುವ ನೀರು ವ್ಯವಸ್ಥೆ ಮತ್ತು ಕೃಷಿಗೆ ಸಹಾಯ ಕಲ್ಪಿಸುವುದಕ್ಕೆ ಈ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ನ್ಯಾಯಾಧೀಕರಣದ ಅಂತಿಮ ತೀರ್ಪಿನ ವಿರುದ್ದವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿ ಬಗ್ಗೆ ಹಾಗೂ ತಮಿಳುನಾಡು ಸರ್ಕಾರವು ಸಹಾ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯ ಬಗ್ಗೆ ತೀರ್ಮಾನವಾದ ನಂತರ ನೀರಿನ ಲಭ್ಯತೆಯನ್ನು ಅನುಸರಿಸಿ ಸದರಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಸ್ಮಾರ್ಟ್ ಕಾರ್ಡ್ ಯೋಜನೆ ಮತ್ತು ಉದ್ಯೋಗ ಮೇಳ

51 (475)

ಶ್ರೀ ರಾಜಶೇಖರ ಬಸವರಾಜ್ ಪಾಟೀಲ್ (ಹುಮ್ನಾಬಾದ್)

ಪ್ರಶ್ನೆ